'ಜಲಸಂರಕ್ಷಣೆ'ಯ ಅರಿವು, ಆಚರಣೆಯ ಆಂದೋಲನವನ್ನು ರೂಪುಗೊಳಿಸಬೇಕಾದುದೂ ಕೂಡಾ, ಅಷ್ಟೇ ದುರಂತವೂ, ನಿಷ್ಠುರವೂ ಆದಂತಹ ಸತ್ಯ! ... ವೈರುಧ್ಯವೂ ಹೌದು!

ಈ ನಿಟ್ಟಿನಲ್ಲಿ 'ನಾಗರಿಕ' ಮನಸ್ಸಿನಲ್ಲಿಯ, ಅಪರಾಧಿ ಪ್ರಜ್ಞೆಯ ದುಗುಡಗಳ ಕನವರಿಕೆಗಳಿವು...!

ಹೊಲ-ಹಳ್ಳಿಗಳ ಜೀವನದಿಂದ ಬಹು ದೂರ ಸಾಗಿಬಂದಿರುವ 'ನಗರವಾಸಿ'ಗಳು ನಾವು 'ಆಧುನಿಕ'ರಾಗಿದ್ದೇವೆ. ನೆಲದ ಜತೆಗಿನ ಕರಳುಬಳ್ಳಿಯ ಸೂತ್ರವನ್ನು ನಾವು ಎಂದೋ ಕಳಚಿಕೊಂಡಿದ್ದಾಗಿದೆ, ನಮ್ಮ ಹೊಸ ತಲೆಮಾರುಗಳನ್ನೂ ಇನ್ನೂ ಹೆಚ್ಚು ಹೆಚ್ಚು 'ನಾಗರಿಕ' ರಾಗಿಸುತ್ತಿದ್ದೇವೆ...!

ಕೊಳವೆಬಾವಿಗಳ ಅತಿಯಾದ ಬಳಕೆಯ ಮೂಲಕ ಅಂತರ್ಜಲವನ್ನು ನಗರವಾಸಿಗಳಂತೆ ಆತನೂ ಬರಿದುಮಾಡುತ್ತಿದ್ದಾನೆ. ಪರ್ಯಾಯ ಸಾಂಪ್ರದಾಯಿಕ 'ಜಲಪೂರಣ'ದ ಬಹು ಹಿಂದಿನಿಂದಲೂ ಬಳಕೆಯಲ್ಲಿದ್ದ ಕ್ರಮಗಳನ್ನು ರೈತರು ಅನುಸರಿಸದೇ ಬರುತ್ತಿರುವುದು ದುರದೃಷ್ಟಕರ! ಒಂದೇ ಬೆಳೆಯನ್ನು ದೀರ್ಘಕಾಲ ನಡೆಸುವುದು. ಬೆಳೆಯ ಪುನರಾವರ್ತನೆ - ಬದಲಿಕೆಯ ಕ್ರಮವನ್ನು ಅನುಸರಿಸದಿರುವುದು. ಕೇವಲ ವಾಣಿಜ್ಯ ದೃಷ್ಟಿಯನ್ನೇ ಇರಿಸಿಕೊಂಡು ನೀರನ್ನು ಹೆಚ್ಚಾಗಿ ಬಯಸುವ ಬೆಳೆಗಳನ್ನು ತನ್ನ ಹೊಲ-ತೋಟಗಳಲ್ಲಿ ಬೆಳೆಸುವುದಕ್ಕೆ ಅತಿ ಮಹತ್ವ ನೀಡುವುದು. ಹೀಗೆ, ಅನೇಕ ವಿಧದ ಕು-ಪದ್ಧತಿಗಳನ್ನು ಇಂದು ರೈತಾಪಿ ಬಂಧುಗಳ ಬಹುದೊಡ್ಡ ವರ್ಗ ಮೈಗೂಡಿಸಿಕೊಂಡಿರುವುದು, 'ನಗರೀಕೃತ' ಮಾನಸಿಕತೆಯು ರೈತರನ್ನೂ, ಹಳ್ಳಿಗರನ್ನೂ ಆವರಿಸಿ ನಂಜುಗೊಳಿಸುವುದಕ್ಕೆ ನಿದರ್ಶನವೇ ಸರಿ...!

ಅಂತೆಯೇ, ಇಂದು 'ಜಲಸಂರಕ್ಷಣೆ'ಯ ಅರಿವು ಅನುಷ್ಠಾನಗಳ-ಆಂದೋಲನ, ಹೊಸತು-ಅಸ್ವಾಭಾವಿಕ ಸಂಗತಿಗಳು ಹಳ್ಳಿ ಪರಿಸರದಲ್ಲಿ ಕೇಳಿಬರಬೇಕಾದ ಅನಿವಾರ್ಯತೆ-ಅಸ್ತಿತ್ವದ ಅವಶ್ಯಕತೆ ಉದ್ಭವಿಸಿದೆ...!

ನಗರವಾಸಿಗಳಿಗೆ 'ಜಲಸಂರಕ್ಷಣೆ' ಒಂದು, ಹೊರಗಿನಿಂದ, ಪ್ರಯತ್ನಪೂರ್ವಕವಾಗಿ ಅಳವಡಿಸಿಕೊಳ್ಳಬೇಕಾದ ವಿಚಾರ. ಇತ್ತೀಚೆಗೆ ಕೆಲವು ಕಡೆ, ಅದು, ಅಲ್ಲಿ ಒಂದು ತೋರ್ಪಡಿಕೆಯ, ಶೋಕಿಯ ವಿಚಾರವೂ ಆಗುತ್ತಿರುವುದು ನಮ್ಮ ಮುಂದೆ ನಗ್ನಗೊಳ್ಳುತ್ತಲೂ ಇರುತ್ತದೆ...!

ಈಗಿನ ಬೆಳವಣಿಗೆ ಎಂದರೆ, ಈ ಪ್ರಯತ್ನಪೂರ್ವಕ - ಅಸ್ವಾಭಾವಿಕ ವಿಷಯದ ರೂಪದಲ್ಲಿಯಾದರೂ ನಮ್ಮ ಹಳ್ಳಿಗಳಲ್ಲಿ ಜಲಸಂರಕ್ಷಣೆ ಮಾಡಬೇಕಾದ ಅನಿವಾರ್ಯತೆ ಉಂಟಾಗಿರುವುದು...! ಅಂತೆಯೇ, ಮನಸ್ಸಿನಲ್ಲಿ ಈ ದುಗುಡಗಳು ಕಾಡುತ್ತಿರುವವು!

ಆದಾಗ್ಯೂ, ಭಾರತ... ಸ್ವಪರಿಪೂರ್ಣ...! ಅದು ಪ್ರಕೃತಿಯಂತೆ ತನ್ನ ಸಮಸ್ಥಿತಿಯನ್ನು ತಾನೇ ಕಾಯ್ದುಕೊಳ್ಳಲು ಶಕ್ತ. ಇಲ್ಲಿ, 'ಗ್ರಾಮಭಾರತ'ದ ಪರಂಪರಾಗತ, ಅಂತರ್ಗತ ಸಹಜ-ಸತ್ವ ಇನ್ನೂ ಪೂರ್ತಿಯಾಗಿ ನಶಿಸದಿರುವುದು ಆಶಾವಾದದ ಕಿರಣಗಳನ್ನು ಮತ್ತೊಮ್ಮೆ ದೂರದಲ್ಲಿ ಮಿನುಗಿಸುತ್ತವೆ. ಸುಜಲ ರಕ್ಷಣೆಯ ನಮ್ಮ ಆಶೋತ್ತರಗಳನ್ನು ಜೀವಂತವಾಗಿರಿಸುತ್ತವೆ...! ಕೆಲದಿನಗಳ ಹಿಂದೆ ನಡೆದ, ಮಣಿಪಾಲದಲ್ಲಿನ ಜಲಸಂರಕ್ಷಣೆ ಕುರಿತ ಕಾರ್ಯಾಗಾರದಂತಹ ಹತ್ತು ಹಲವು ಪ್ರಾಮಾಣಿಕ ಪ್ರಯತ್ನಗಳು ಜಲಸಂರಕ್ಷಣೆಯ ಆಂದೋಲನಕ್ಕೆ ಚೈತನ್ಯದ 'ಮಹಾಪೂರಣ'ವನ್ನು ನೀಡುತ್ತಲಿವೆ. 'ಜಲಭಾರತಿ' ಸಂಘಟನೆಯು, ಮಣಿಪಾಲದ 'ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನೋಲಜಿ'ಯ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಸಹಯೋಗದೊಂದಿಗೆ ಇತ್ತೀಚೆಗೆ ಎರಡು ದಿನಗಳ 'ಜಲಸಂರಕ್ಷಣೆ' ಯ ಕುರಿತಾದ ಕಾರ್ಯಾಗಾರವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ, ರೈತರು, ಸಾವಯವ ಕೃಷಿಯ ಪ್ರಯೋಗದಲ್ಲಿರುವವರು, ಆಸಕ್ತರು, ಜಲಸಂರಕ್ಷಣೆಯ ಕುರಿತಾಗಿ ಅಧ್ಯಯನ, ಅರಿವು ಮೂಡಿಸುತ್ತಿರುವ ಸಂಪನ್ಮೂಲ ವ್ಯಕ್ತಿಗಳು, ಉದ್ಯಮಿಗಳು, ಶಿಕ್ಷಕ-ಪ್ರಾಧ್ಯಾಪಕರು ಹುರುಪಿನಿಂದ ಪಾಲ್ಗೊಂಡಿದ್ದು, ನಿಜಕ್ಕೂ ಸಂತಸ ಮೂಡಿಸುವ ವಿಚಾರ. ಮಳೆಕೊಯ್ಲು, ಕೊಳವೆಬಾವಿಗಳ ಜಲ ಮರುಪೂರಣ, ಇಂಗುಗುಂಡಿಗಳು, ಪಾರಂಪರಿಕ-ಹೊಸತು ಮಾದರಿಗಳ 'ಕಟ್ಟ', ಒಡ್ಡುಗಳು ಹೀಗೆ ಹಲವು ಜಲಸಂರಕ್ಷಣೆಯ ವಿಚಾರಗಳ ಕುರಿತಾಗಿ ಗಂಭೀರವಾದ, ವಿಷಯಾಧಾರಿತ ಪ್ರದೇಶಾಧಾರಿತ ಚರ್ಚೆ, ಉಪನ್ಯಾಸ, ಪ್ರಸ್ತುತಿಗಳು, ಜಲಸಂರಕ್ಷಣೆಯ ಕುರಿತಾಗಿ ಅನೇಕ ಹೊಸತು ವಿಷಯಗಳನ್ನು, ಅಧ್ಯಯನ-ಅನುಷ್ಠಾನದ ಆಯಾಮಗಳನ್ನು ತೆರೆದಿಟ್ಟವು.

ತೀರ್ಥಹಳ್ಳಿಯ 'ಕೃಷಿ ಪ್ರಯೋಗ ಪರಿವಾರ', ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ, ವಾರಾಣಸಿ ಅಧ್ಯಯನ-ಅಭಿವೃದ್ಧಿ ಸಂಸ್ಥೆ, ಹೀಗೆ ಹಲವಾರು ಸಂಘ-ಸಂಸ್ಥೆಗಳು ತಮ್ಮ ಸಹಭಾಗಿತ್ವದಲ್ಲಿ ನಡೆದ ಜಲಸಂರಕ್ಷಣೆಯ ಹಲವು ಕಾರ್ಯಗಳನ್ನು-ಕಾರ್ಯವಿಧಾನಗಳನ್ನು - ಅವುಗಳ ತಾಂತ್ರಿಕ ಮಾಹಿತಿಯೊಂದಿಗೆ ಹಂಚಿಕೊಂಡು, 'ಜಲಸಾಕ್ಷರತೆ, ಜಾಗೃತಿ ಹಾಗೂ ಸಂರಕ್ಷಣೆ'ಯ ಆಂದೋಲನಕ್ಕೆ ಹೊಸತು ಶಕ್ತಿಯನ್ನು - ಸ್ಫೂರ್ತಿಯನ್ನು ನೀಡಿದವು. ನಾವು ವ್ಯಕ್ತಿಗತವಾಗಿ, ತಂಡ-ಸಮುದಾಯಗಳಲ್ಲಿ ಹಾಗೂ ಸಂಘಸಂಸ್ಥೆಗಳ ಸ್ತರಗಳಲ್ಲಿ, ಯಾವ ರೀತಿಯಿಂದ ಜಲಸಂರಕ್ಷಣೆಯ ಕಾರ್ಯವನ್ನು ಮುನ್ನಡೆಸಬಹುದೆಂದು ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಎಲ್ಲರ ಮನದಲ್ಲಿ ಗಾಢವಾದ ಅರಿವನ್ನು, ಹುರುಪನ್ನು ಮೂಡಿಸುವುದರಲ್ಲಿ ಕಾರ್ಯಾಗಾರ ಯಶಸ್ವಿಯಾಯಿತು.

ಜಲಭಾರತಿಯ ಇಂತಹ ಪ್ರಾಮಾಣಿಕ ಪ್ರಯತ್ನಗಳು ಇಂದಿನ ಸಂಕಷ್ಟದ ಸ್ಥಿತಿಯಲ್ಲಿಯೂ 'ಜಲಸಂರಕ್ಷಣೆಯ' ಆಶಾಕಿರಣಗಳನ್ನು ಮೂಡಿಸುತ್ತವೆ...! 'ಸಮೃದ್ಧ ಜಲಭಾರತ'ದ ಆಶೋತ್ತರಗಳನ್ನು ಜೀವಂತವಾಗಿರಿಸುತ್ತವೆ...!

'ಜೀವನ- ಸೃಷ್ಟಿಯ ಸಂಕಲನ
ಸಿಂಧುತ್ವದ ನವಜಾಗರಣ
ಗ್ರಾಮ-ಗ್ರಾಮದಿ ಮನೆಮಂದಿರದಿ
ಸುಜಲ ಜಾಗೃತಿಯ ಸಂಚಲನ... '